ಸ್ಟೈಲಿನಲ್ಲೇ ನಡೆಯುವುದು, ಮಾತಾಡುವುದು ಮಾಡಿ ಹುಡುಗಿಯರ ಗಮನ ಸೆಳೆಯಲು ಹೆಣಗುತ್ತಿದ್ದ. ಶೇಕ್ರಿಗೆ ಆ ಸೌಭಾಗ್ಯವಿರಲಿಲ್ಲ. ಆದರೆ ತನ್ನ ನೆಚ್ಚಿನ ಹೀರೋ ದೇವಾನಂದನಂತೆ ಬಲಗೈಗೆ ವಾಚು ಕಟ್ಟಿಕೊಳ್ಳುವುದು, ಹೇರ್ ಸ್ಟೈಲ್ ಮಾಡುವುದು ಮಾಡುತ್ತಿದ್ದ. ಆದರೆ ಅವನ ಕೂದಲು ದೇವಾನಂದನ ವಿನ್ಯಾಸಕ್ಕೆ ಬಗ್ಗುತ್ತಿರಲಿಲ್ಲ. ನೀರು ಮೆತ್ತಿ ಬಾಚಣಿಗೆಯಲ್ಲಿ ಒತ್ತಿ ಒತ್ತಿ ಗುಬ್ಬಿ ಕುಂಡರಿಸಿಕೊಂಡರೂ ಅರೆಗಳಿಗೆಯಲ್ಲಿ ಅವು ತಮ್ಮ ಮೂಲ ವಿನ್ಯಾಸಕ್ಕೇ ಬಂದುಬಿಡುತ್ತಿದ್ದವು. ಆಗೆಲ್ಲ ಶೇಕ್ರಿಗೆ ಭಲೇ ಪಿಚ್ಚೆನಿಸುತ್ತಿತ್ತು. ಹೀಗಿರುತ್ತಾ ಜಯಂತನೂ ಶೇಕ್ರಿಯೂ ಡಿಗ್ರಿ ಮುಗಿಸಿ ಊರಿಗೆ ಹಿಂತಿರುಗಿ ಬಂದಾಗ ಮೀನಾಕ್ಷಿಯೆಂಬ ದಂತದ ಗೊಂಬೆ ಕಾಣಿಸಿಕೊಂಡು ಇಬ್ಬರನ್ನೂ ಆವರಿಸಿಕೊಂಡಳು.

ಮೀನಾಕ್ಷಿಯ ಸೌಂದರ್ಯವು ಅಸದಳ. ಆಕೆಯ ಕಣ್ಣು ಮೀನಿನಂತೆಯೇ ಮಿನಿಗುಟ್ಟುತ್ತಿರುವುವು. ಅದಕ್ಕೇ ಮೀನಾಕ್ಷಿ ಎನ್ನುವ ಹೆಸರು ಆಕೆಗೆ ಒಪ್ಪುವಂಥದೇ. ಅವಳು ನಡೆದರೆ ರಸ್ತೆಗೆ ಸೊಬಗು. ಸೆರಗು ಗಾಳಿಗೆ ಹಾರಿದರೆ ಗಾಳಿಗೇ ಬೆವರ ಪರಿಮಳದ ಘಮಲು. ಬಡ ಕುಟುಂಬದ ಆಕೆ, ಆರೋಗ್ಯ ಅಷ್ಟಕ್ಕಷ್ಟೇ ಆದ ಬಡಗಿ ಕಸುಬಿನ ಪುಟ್ಟಾಚಾರಿಯ ಮುದ್ದಿನ ಮಗಳು. ಪುಟ್ಟಾಚಾರಿಗೆ ಇಬ್ಬರು ಮಕ್ಕಳು. ಮೀನಾಕ್ಷಿ ಮತ್ತವಳ ತಮ್ಮ. ಅವನಿನ್ನೂ ಬಾಲಕ. ಬಡತನದಲ್ಲೇ ಏಗುತ್ತಾ ಪುಟ್ಟಾಚಾರಿ ಮಕ್ಕಳನ್ನು ಹೇಗೋ ಏನೋ ಅನ್ನುವಂಗೆ ಸಾಕುತ್ತಿದ್ದ. ಪುಟ್ಟಾಚಾರಿಯ ಹೆಂಡತಿ ಅರ್ಥಾತ್ ಮೀನಾಕ್ಷಿಯ ಅವ್ವ ಸುಭದ್ರವ್ವ. ಸುಭದ್ರವ್ವಗೆ ಮಗಳು ಮೈನೆರೆದಾಗ ಅಷ್ಟೇನೂ ಸಂಭ್ರಮವಾಗಿರಲಿಲ್ಲ. ಆಕೆಯ ಅಂದ ಚಂದಕ್ಕೆ ಅವಳಲ್ಲಿ ಏನೋ ತಳಮಳ. ಊರಿನ ಪಡ್ಡೆಗಳ ಬಗ್ಗೆ ಅಸಮಾಧಾನ. ತಾಯಿ ಮಗಳು ಇಬ್ಬರೂ ಅಡುಗೆ ಬಸಜ್ಜನ ಗುಂಪಿನಲ್ಲಿ ಅಡಕೆ ಸುಲಿಯಲು ಹೋಗುತ್ತಿದ್ದರು, ಪುಟ್ಟಾಚಾರಿ ಒಂದು ದಿನ ಹಿಂಗಿದ್ದರೆ ಇನ್ನೊಂದು ದಿನ ಹಾಸಿಗೆ ಹಿಡಿಯುತ್ತಿದ್ದ. ಬಡತನಕ್ಕೆ ಈ ಸೌಂದರ್ಯ ಅನ್ನೋದು ಭಯಾನಕವಾಗಿ ಕಾಣಿಸುತ್ತಿತ್ತು. ಸುಭದ್ರಮ್ಮನಿಗೆ ಅದೇ ದಿಗಿಲು. ಅವ್ವನ ಜೊತೆಗೇ ಇದ್ದರೂ ಮೀನಾಕ್ಷಿಯ ಕಡೆ ಒಂದು ಕಣ್ಣಿದ್ದರೂ ಸುಭದ್ರವ್ವಗೆ ಮಗಳದ್ದೇ ಚಿಂತೆ. ಇಷ್ಟಾಗಿಯೂ ಆ ಊರಿನ ಹುಡುಗರು ಕೀಟ್ಲೆ ಮಾಡುವವರೇ ವಿನಾ ಕೇಡುಮಾರಿಗಳಲ್ಲ. ಊರಿನ ಹೆಣ್ಣು ಮಕ್ಕಳನ್ನು ಕಂಡರೆ ದೂರದಿಂದಲೇ ಕಣ್ಣಾಯಿಸಿ ಕೀಟ್ಲೆ ತೆಗೆಯುವುದು ಮಾಮೂಲಿನದೇ. ಆದರೆ ಮೀನಾಕ್ಷಿಯ ಚೆಲುವು ಇಮ್ಮಡಿಯಾಗಿದ್ದು ಹುಡುಗರಲ್ಲಿ ಪೈಪೋಟಿ ಇದ್ದೇ ಇತ್ತು. ಆದರೆ ಮೀನಾಕ್ಷಿಯೂ ತನ್ನ ಹದ್ದುಬಸ್ತಿನಲ್ಲಿ ಹೆಂಗಿರಬೇಕೋ ಹಂಗಿರಲು ಹೆಣಗುತ್ತಿದ್ದಳು. ಗೌಡ್ರ ಜಯಂತ, ಅಂಗಡಿ ಶೇಕ್ರಿ ಇಬ್ಬರಿಗೂ ಗೊತ್ತಿರುವಂತೆಯೇ ಇಬ್ಬರೂ ಮೀನಾಕ್ಷಿಯ ಕುಡಿನೋಟಕ್ಕೆ ಬಿದ್ದು ಸಾಯುತ್ತಿದ್ದರು. ಆಕೆ ಉಟ್ಟ ಲಂಗದಲ್ಲಿ ಅನೇಕಾನೇಕ ತೇಪೆ, ಮಾಸಿದ ದಾವಣಿ, ಬರಿದಾದ ಮೋಹಕ ಕೈಗಳನ್ನು ಕಂಡಾಗೆಲ್ಲ ಇಬ್ಬರಿಗೂ ಮಂಕು ಬಡಿದಂತಾಗುತ್ತಿತ್ತು. ಇಬ್ಬರ ಪ್ರೀತಿಯಲ್ಲೂ, ರೀತಿಯಲ್ಲೂ ಒಂಚೂರು ವ್ಯತ್ಯಾಸವೂ ಇತ್ತು. ಶೇಕ್ರಿಯು ಸಾಹಿತ್ಯದ ವಿದ್ಯಾರ್ಥಿಯಾದ್ದರಿಂದ ಅವನ ನೋಟದಲ್ಲಿ ಅಲಂಕಾರಿಕ ಮೋಹಕತೆ ಇರುತ್ತಿತ್ತು. ಪಂಪ, ಬಸವಣ್ಣ, ಕುವೆಂಪು ಅಂತ ಓದಿಕೊಂಡು ಒಂಚೂರು ಲೋಹಿಯಾ ಬಗ್ಗೆಯೂ ಒಲವಿರಿಸಿಕೊಂಡವನಾಗಿದ್ದ. ಹಂಗಾಗಿ ಜಯಂತನ ಒರಟುತನ ಇವನಲ್ಲಿರಲಿಲ್ಲ. ಅವಳನ್ನು ನೋಡಿದರೆ ಸಾಕು ಅವನಲ್ಲಿ ಬಣ್ಣದ ಕನಸುಗಳು ಸಾಲುಗಟ್ಟುತ್ತಿದ್ದವು. ಮೀನಾಕ್ಷಿ ಅಂಗಡಿಗೆ ಬಂದಾಗೆಲ್ಲ ಅವನು ಪುಳಕಗೊಳ್ಳುತ್ತಿದ್ದ. ಬೇಕಂತಲೇ ಅವಳನ್ನು ಕಾಯಿಸಿ ಸತಾಯಿಸುತ್ತಿದ್ದ. ಸಂಕೋಚಿಯಾಗುತ್ತಿದ್ದ, ಮೃದುಭಾಷಿಯಾಗುತ್ತಿದ್ದ. ಆಕೆ ಬೆಂಕಿ ಪೊಟ್ಟಣ ಕೇಳಿದರೆ ಇವನು ಗಡಿಬಿಡಿ ಮಾಡಿಕೊಂಡವನಂತೆ ಟೀ ಪೊಟ್ಟಣ ಕೊಡುವುದು. ಅವಳು 'ಅದಲ್ಲಾ ಅದಲ್ಲಾ' ಅಂತನ್ನುವುದು. 'ಮತ್ತೇನು'? ಅಂತ ಇವನನ್ನುವುದು, ಬೇಕಂತಲೇ ಕೆಣಕುವುದು, ಅವಳಿಗೆ ಸಿಟ್ಟು ಬರುವಂತೆ ಮಾಡುವುದು. ಸಿಟ್ಟು ಮಾಡಿಕೊಂಡಾಗೆಲ್ಲಾ ಅವಳು ಮತ್ತಷ್ಟು ಸುಂದರವಾಗಿ ಕಾಣಿಸುತ್ತಿದ್ದಳು. ಒಮ್ಮೆ ಅವರಪ್ಪ ಭದ್ರಪ್ಪ ಇದ್ದಾಗ ಮೀನಾಕ್ಷಿ ಅಂಗಡಿಗೆ ಬಂದಳು. ಆದರೆ, ಅವಳನ್ನು ಬೇಗ ಕಳಿಸುವುದು ಶೇಕ್ರಿಗೆ ಬ್ಯಾಡಾಗಿತ್ತು. ಅದಕ್ಕೇ ಅವನು ಬೇರೆ ಗಿರಾಕಿಗಳ